ವಿಷಯವೂ ತಿಳಿಯುವುದು ಬೇಡ ಅಷ್ಟೇ' ಅನ್ನುವಲ್ಲಿಗೆ ಜಗಳಗಳು ನಿಂತು ಮನೆ ಸ್ವಲ್ಪ ಶಾಂತವಾಯಿತು.

ಇಷ್ಟಾಗುವ ಹೊತ್ತಿಗೆ ನನ್ನ ಮನಸ್ಸಿಗೊಂದು ನೆಮ್ಮದಿ. ಅವಳ ಸುಖವನ್ನರಸಿ ಅವಳು ನಡೆದರೆ, ನಾನು ನನ್ನ ಸುಖದ ದಾರಿಯಲ್ಲಿ ನಡೆಯುತ್ತಿದ್ದೆ. ಮಗಳು ಖುಷಿ ಒಂದು ಹಂತಕ್ಕೆ ಬಂದು ನಿಲ್ಲುವವರೆಗೆ ಮತ್ತಿನ್ನದಿನ್ನೇನು ಯೋಚನೆಯಿಲ್ಲ ಎಂದು ಅಂದುಕೊಳ್ಳುವ ಕಾಲಕ್ಕೆ ಸುಲೋಚನಾ ನನ್ನ ಬಳಿ ಡಿವೋರ್ಸ್ ಕೇಳಿದಳು. ಇಲ್ಲವೆನ್ನುವುದಕ್ಕೆ ನಾನೇನು ಅವಳಿಗೆ ಸಮರ್ಥನಾದ ಗಂಡೇ... ಆದರೂ ಕಾರಣ ಕೇಳಿದೆ. ಅವಳು,

'ನಾನು ಮತ್ತೆ ಶೇಷಾದ್ರಿ ಮದುವೆಯಾಗ್ಬೇಕೂಂತಿದ್ದೇವೆ' ಅಂದಳು ದೃಢವಾಗಿ. ಅಷ್ಟಂದ ಮೇಲೆ ಆ ಬಗ್ಗೆ ನನಗೆ ಮಾತಿಲ್ಲ. ಉಳಿದ ಒಂದು ಪ್ರಶ್ನೆಯೆನ್ನುವಂತೆ ನಿಧಾನಕ್ಕೆ,

'ಮಗಳು ಖುಷಿ?...' ಅಂದೆ.

'ಅವಳ ಭವಿಷ್ಯವನ್ನು ನೀವೇ ರೂಪಿಸಬೇಕು. ಶೇಷಾದ್ರಿಯವರು ಮಗುವಿನ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಸಾಧ್ಯವಿಲ್ಲವೆಂದು ಮೊದಲೇ ತಿಳಿಸಿದ್ದಾರೆ. ಅವರ ಮನೆಯಲ್ಲಿ ಈ ಮದುವೆಯನ್ನು ಒಪ್ಪುವುದೇ ಕಷ್ಟವಂತೆ... ಆದರೂ ನನ್ನನ್ನು ಕೈಬಿಡುವುದಿಲ್ಲವೆಂದು ಮಾತು ಕೊಟ್ಟಿದ್ದಾರೆ. ನಿಮ್ಮ ವಿಚಾರವಾಗಿ ನಾನೀವರೆಗೆ ಶೇಷಾದ್ರಿಯವರಿಗೇನನ್ನೂ ತಿಳಿಸಿಲ್ಲ. ನಾವೀಗ ಗಂಡ-ಹೆಂಡತಿಯರಂತಿಲ್ಲ, ನಾನವರಿಂದ ಡಿವೋರ್ಸ್ ಪಡೆಯುತ್ತೇನೆಂದವರಿಗೆ ತಿಳಿಸಿದ್ದೇನಷ್ಟೇ... ನಮ್ಮ ಮದುವೆಯನ್ನೇ ಒಪ್ಪದ ಅವರ ಮನೆಯಲ್ಲಿ ನನ್ನ ಮಗಳ ಜೀವನ ನರಕವಾಗೋದು ಬೇಡ. ನಾನು ನಿಮ್ಮಿಂದ ಯಾವ ಜೀವನಾಂಶವನ್ನೂ ಬೇಡುವುದಿಲ್ಲ. ಆದರೆ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿರೆಂದು ಬೇಡಿಕೊಳ್ಳುತ್ತಿದ್ದೇನೆ' ಸುಲೋಚನಾ ಕಣ್ಣೊರೆಸಿಕೊಂಡಿದ್ದಳು.

'ಅವಳು ನನ್ನ ಮಗಳೂ ಕೂಡ... ಆಗ್ಲಿ, ಯಾವತ್ತು ಮದುವೆ?' ನಾನೂ ಮುಂದಿನ ಪರಿಸ್ಥಿತಿಗೆ ಮಾನಸಿಕವಾಗಿ ಸಿದ್ಧನಾಗಬೇಕಿದ್ದರಿಂದ ಕೇಳಿದ್ದೆ.

'ಮದುವೆಗೆ ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಅಷ್ಟರಲ್ಲಿ ನಮ್ಮಿಬ್ಬರ ಡಿವೋರ್ಸ್ ನಡೆದು ಹೋಯಿತೆಂದಾದರೆ ಮತ್ತೆ ಸಮಸ್ಯೆಯಿಲ್ಲವಲ್ಲ, ಅದ್ಕೆ ಈವಾಗ್ಲೆ ವಿಷಯವನ್ನು ತಿಳಿಸಿದ್ದು' ಎಂದು ಮಾತು ಮುಗಿಸಿದಳು ಸುಲೋಚನಾ. ನನಗೆ ಅವಳ ಜೊತೆ ಮಾತನಾಡುವುದು ತುಂಬಾನೇ ಇತ್ತು. ಆದರೆ ಅವಳಿಗೆ ನನ್ನ ಬಳಿಯಲ್ಲಿ ಇನ್ನಾವ ಮಾತುಗಳು ಉಳಿದಿರಲಿಲ್ಲ.

'ಈ ಶೇಷಾದ್ರಿ ಎಂಥಾ ವ್ಯಕ್ತಿ? ಅವನು ನಿಜವಾಗಿಯೂ ಸುಲೋಚನಾಳನ್ನು ಮದುವೆಯಾಗಿ, ಅವಳಿಗೆ ಒಳ್ಳೆಯ ಜೀವನವನ್ನು ಕರುಣಿಸುವನೇ?... ಇಲ್ಲ, ಇದರ ಹಿಂದೆ ಇನ್ನೇನಾದರೂ ಮೋಸ ಜಾಲವಿದೆಯೇ?... ಅವನು ಸುಲೋಚನಾಳನ್ನು ಅಷ್ಟೊಂದು ಗಾಢವಾಗಿ ಪ್ರೀತಿಸುತ್ತಿರುವುದು ನಿಜವೇ?...' ಈ ರೀತಿಯ ನಾನಾ ಆಲೋಚನೆಗಳು ಮನಸ್ಸನ್ನು ಮುತ್ತಿಕೊಂಡಿರುವುದಾದರೂ, ಅದನ್ನೆಲ್ಲಾ ಸುಲೋಚನಾಳ ಮುಂದೆ ಬಾಯಿಬಿಟ್ಟು ಕೇಳಲಾಗದಷ್ಟು ಅಸಮರ್ಥನಾಗಿದ್ದೆ.

ಅದು ಮಳೆಗಾಲದ ಒಂದು ಸಂಜೆ. ಮಧ್ಯಾಹ್ನದಿಂದ ಮಳೆ ಬಿಡದೆ ಧಾರಾಕಾರವಾಗಿ ಸುರಿಯುತ್ತಿತ್ತು. ನಾನು ಕೆಲಸಬಿಟ್ಟು ಮನೆಗೆ ಬರುವಾಗಲೇ ಗಂಟೆ ಏಳು ದಾಟಿತ್ತು. ರೇನ್‌ಕೋಟ್ ಹಾಕಿದ್ದರೂ ಆಕಾಶವೇ ಬಿರಿದು ಬೀಳುತ್ತಿದ್ದ ನೀರ ಹನಿಗಳಿಂದ ತಪ್ಪಿಸಿಕೊಳ್ಳಲಾಗದೆ ಪೂರ್ತಿ ಒದ್ದೆಯಾಗಿದ್ದೆ. ಬಾಗಿಲು ತೆರೆದು ನಿಂತ ಅಮ್ಮ ಒದ್ದೆಮುದ್ದೆಯಾಗಿದ್ದ ನನ್ನನ್ನು ಕಂಡು,

'ಸುಲೋಚನಾ ಎಲ್ಲೋ?' ಕೇಳಿದ್ದರು.

'ಇನ್ನೂ ಮನೆಗೆ ಬಂದಿಲ್ವಾ?' ಅಲ್ಲೇ ಸೀಟೌಟ್‌ನಲ್ಲಿ ಹಾಕಿದ್ದ ಟವಲನ್ನೆತ್ತಿಕೊಂಡು ತಲೆಯನ್ನೊರಸುತ್ತಾ ಕೇಳಿದ್ದೆ.

'ಇಲ್ಲ ಕಣೋ... ಮಗು ಬೇರೆ ಅವಳ ದಾರಿಯನ್ನೇ ಕಾಯುತ್ತಾ ಕುಳಿತಿದೆ' ಅಮ್ಮನೆಂದಾಗ ನಾನದನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸದೆ,

'ಮಳೆಯಲ್ವಾ, ಹಾಗಾಗಿ ತಡವಾಗಿರ್ಬಹುದು. ಇರು ಒಂದು ಫೋನ್ ಮಾಡ್ತೇನೆ' ಎಂದು ಸುಲೋಚನಾಳಿಗೆ ಫೋನಾಯಿಸಿದೆ. ಮೊದಲ ಬಾರಿಗೆ ಕರೆಯನ್ನು ಸ್ವೀಕರಿಸದ ಅವಳು ಮತ್ತೊಮ್ಮೆ ಕರೆಮಾಡಿದಾಗ ರಿಸೀವ್ ಮಾಡಿ 'ಹಲೋ' ಎಂದಳು. 'ಯಾಕಿನ್ನು ಮನೆಗೆ ಬಂದಿಲ್ಲ?' ಎಂದು ವಿಚಾರಿಸಿದಾಗ, ಇವತ್ತು ಮಧ್ಯಾಹ್ನ ರಜಾ ಹಾಕಿ ಅಮ್ಮನ ಮನೆಗೆ ಹೋಗಿದ್ದು, ಮಳೆ ಜೋರಾಗಿರುವುದರಿಂದ ನಾಳೆ ಬರುವುದಾಗಿ ತಿಳಿಸಿ ಕರೆಯನ್ನು ತುಂಡರಿಸಿದಳು. ವಿಷಯವನ್ನು ಅಮ್ಮನ